**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:120/2018**

**ಪಿ.ಡಬ್ಲ್ಯೂ-2**

**ಸಾಕ್ಷಿಗೆ ದಿನಾಂಕ 14-11-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | : ಪ್ರದೀಪ್ ಆರ್ |
| ತಂದೆಯ ಹೆಸರು | : ಲೇಟ್ ರಾಜಾರಾಂ ಬಿ ಎಂ |
| ವಯಸ್ಸು | : 43 ವರ್ಷ |
| ಉದ್ಯೋಗ | : ಛೀಫ್ ಮ್ಯಾನೇಜರ್, ಎಸ್ ಬಿ ಐ, ಹೊಸದುರ್ಗ |
| ವಾಸಸ್ಥಳ | : ಹೊಸದುರ್ಗ |

**ಮುಖ್ಯವಿಚಾರಣೆ : ಪಿರ್ಯಾದುದಾರರ ಪರ ವಕೀಲರಾದ ಶ್ರೀ ಹೆಚ್ ಎನ್ ಎಂ ರವರಿಂದ**

ಆರೋಪಿ ನಮ್ಮ ಬ್ಯಾಂಕಿನ ಗ್ರಾಹಕರಾಗಿರುತ್ತಾರೆ. ಅವರು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರುತ್ತಾರೆ. ಅವರಿಗೆ ನಮ್ಮ ಬ್ಯಾಂಕಿನಿಂದ ಚೆಕ್ ನಂ809746 ರಿಂದ 809815 ರವರೆಗಿನ ಚೆಕ್ ಬುಕ್ಕನ್ನು 13-8-2015 ರಂದು ನೀಡಿರುತ್ತೇವೆ. ಈ ಪ್ರಕರಣದ ನಿಪಿ-1 ರ ಚೆಕ್ಕು ಮೇಲೆ ಹೇಳಿದ ಸರಣಿ ಚೆಕ್ಕುಗಳಲ್ಲಿ ಇರುತ್ತದೆ. ನಿಪಿ-1 ರ ನಂಬರ್ 809800. ಸಾಕ್ಷಿಗೆ ಆರೋಪಿಯ ಸ್ಪೆಸಿಮನ್ ಸಹಿಯನ್ನು ನೋಡಿ ಗುರುತಿಸಲು ಹೇಳಿದ್ದು ಅವರು ತಮ್ಮ ಬ್ಯಾಂಕಿನ ದಾಖಲೆಗಳನ್ನು ಪರಿಶೀಲಿಸಿ ನಿಪಿ-1 ರ ಮೇಲಿರುವ ನಿಪಿ-1(ಎ) ಸಹಿ ಆರೋಪಿಯದು ಎಂದು ಗುರುತಿಸುತ್ತಾರೆ. ಆರೋಪಿಯ ಉಳಿತಾಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕಿನಿಂದ ದಿನಾಂಕ 24-1-2018 ರಂದು ಹಿಂಬರಹ ನೀಡಿರುತ್ತೇವೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಹೆಚ್ ಎಲ್ ಎನ್ ರವರಿಂದ**

ದಿನಾಂಕ 20-5-2024 ರಂದು ನಾನು ಎಸ್ ಬಿ ಐ ಹೊಸದುರ್ಗ ಶಾಖೆಯ ಛೀಫ್ ಮ್ಯಾನೇಜರ್ ಆಗಿ ಕರ್ತವ್ಯಕ್ಕೆ ನೇಮಕಗೊಂಡಿರುತ್ತೇನೆ. ನಿಪಿ-1 ರ ಚೆಕ್ಕನ್ನು ನಮ್ಮ ಬ್ಯಾಂಕಿಗೆ ಹಾಜರು ಮಾಡಿದಾಗ ನಾನು ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ನಿಪಿ-1 ರಲ್ಲಿರುವ ಆರೋಪಿಯ ಚೆಕ್ಕಿನ ಸಹಿ ಮತ್ತು ನಮ್ಮ ಬ್ಯಾಂಕಿನ ದಾಖಲೆಗಳಲ್ಲಿ ಇರುವ ಆರೋಪಿಯ ಸ್ಪೆಸಿಮನ್ ಸಹಿಗೂ ವ್ಯತ್ಯಾಸ ಇದ್ದು ತಾಳೆ ಆಗುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ವ್ಯತ್ಯಾಸ ಇರುತ್ತದೆ ಎಂದು

ಉತ್ತರಿಸುತ್ತಾರೆ. ನಿಪಿ-1 ಮತ್ತು ಬ್ಯಾಂಕಿನಲ್ಲಿನ ಮಾದರಿ ಸಹಿಗಳಲ್ಲಿ ವ್ಯತ್ಯಾಸ ಇದ್ದರೂ ಬ್ಯಾಂಕಿನವರು ಸಹಿಯಲ್ಲಿ ವತ್ಯಾಸ ಇರುತ್ತದೆ ಎಂದು ಹಿಂಬರಹ ನೀಡದೇ ಸಾಕಷ್ಟು ಹಣ ಇರುವುದಿಲ್ಲ ಎಂದು ದೂರು ದಾರರ ಅನುಕೂಲಕ್ಕಾಗಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ನಿಜಾಂಶ ತಿಳಿದಿದ್ದರೂ ಪಿರ್ಯಾದುದಾರರ ಬ್ಯಾಂಕಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ವಿಚಾರಣೆಗಾಗಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**